ಮೂಲ ದಾವಾ ಸಂಖ್ಯೆ. 88/2015 ಸಿ ಡಬ್ಲ್ಯೂ 1

(ದಿನಾಂಕ 16-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಬಿ ಆರ್ ವಕೀಲರಿಂದಃ-

ಸರ್ವೆ ಮಾಡುವ ಸಮಯದಲ್ಲಿ ವಾದಿಯರು ಸರ್ವೆ ಕಾರ್ಯದ ವೀಡಿಯೋವನ್ನು ಮತ್ತು ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸಾಕ್ಷಿಯು ವೀಡಿಯೋ ಮಾಡಿದ್ದು ಗೊತ್ತು ಫೋಟೋ ತೆಗೆದಿಲ್ಲವೆನ್ನುತ್ತಾರೆ. ಆ ದಿನ ಮಾಡಿರುವಂತಹ ವೀಡಿಯೋ ಚಿತ್ರೀಕರಣದ ಪೆನ್‌ಡ್ರೈವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನ್ನದು ಯಾವುದೇ ತಕರಾರು ಇಲ್ಲ. ಸರ್ವೆ ಸಮಯದಲ್ಲಿ ಪ್ರತಿವಾದಿಯ ದಕ್ಷಿಣದ ಆಸ್ತಿಯನ್ನು ಗುರುತು ಮಾಡಿ ಮುಂದೆ ಬಂದಿದ್ದು ಇದೆ ಎಂದರೆ ಸರಿ. ಪ್ರತಿವಾದಿ ನಂ.1 ಮತ್ತು 2 ರವರ ಆಸ್ತಿಯ ದಕ್ಷಿಣದಿಂದ ಉತ್ತರಕ್ಕೆ ಖರೀದಿ ಪತ್ರದನ್ವಯ ಅಳತೆ ನಿಗದಿ ಮಾಡಲು ಟೇಪ್ ಮೂಲಕ ಅಳತೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಅನುಭವದಂತೆ ಅಳತೆ ಮಾಡಿರುತ್ತೇನೆ ಎನ್ನುತ್ತಾರೆ.

ಸಾಕ್ಷಿಗೆ 6 ಫೋಟೋಗಳನ್ನು ತೋರಿಸಿ ಸದರಿ ಫೋಟೋಗಳು ಸರ್ವೆ ಸಮಯದಲ್ಲಿ ತೆಗೆದಿರುವಂತಹ ಫೋಟೋಗಳಾಗಿರುತ್ತವೆಂದರೆ ಸಾಕ್ಷಿಯು ಫೋಟೋಗಳನ್ನು ಪರಿಶೀಲಿಸಿ ಅವು ಪೂರ್ಣ ಪ್ರಮಾಣದ ಫೋಟೋಗಳಾಗದೇ ಇರುವುದರಿಂದ ಅವುಗಳನ್ನು ಗುರುತಿಸಲು ಸಾಧ್ಯವಿಲ್ಲವೆನ್ನುತ್ತಾರೆ.

ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ಅಪೂರ್ಣ ಕಟ್ಟಡ ಮತ್ತು ನಿಪಿ-32 ರಲ್ಲಿ ಕಾಣುವ ಅಪೂರ್ಣ ಕಟ್ಟಡ ಒಂದೇ ಇರುತ್ತದೆಂದರೆ ಸಾಕ್ಷಿಯು ಫೋಟೋ ನೋಡಿ ಹೌದು ಎಂದು ಉತ್ತರಿಸುತ್ತಾರೆ ಸದರಿ ಫೋಟೋವನ್ನು ನಿಪಿ-33 ಎಂದು ಗುರುತಿಸಲಾಯಿತು. ಪ್ರತಿವಾದಿ ನಂ.1 ಮತ್ತು 2 ಮತ್ತು ವಾದಿಯ ಆಸ್ತಿಗಳು ಅವರವರ ಖರೀದಿ ಪತ್ರದ ಅಳತೆಯಂತೆ ಹಾಗೂ ವಾಸ್ತವದಲ್ಲಿರುವಂತಹ ಅಳತೆಯಂತೆ ವ್ಯತ್ಯಾಸ ಇರುತ್ತದೆಂದರೆ ಸರಿ.

ಪ್ರತಿವಾದಿಯರು ಮತ್ತು ವಾದಿಯರು ತಮ್ಮ ಮೂಲ ದಾಖಲೆಗಳಂತೆ ಎಷ್ಟು ವಿಸ್ತೀರ್ಣದ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರಂತಾ ಕಮಿಷನರ್ ವರದಿಯಲ್ಲಿ ತೋರಿಸಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ಕಮಿಷನರ್ ವರದಿಯಲ್ಲಿ ವಾದಿಯ ಆಸ್ತಿಯಲ್ಲಿಯ ಕಟ್ಟಡದ ಉದ್ದ ಅಗಲದ ಅಳತೆ ಮತ್ತು ಪ್ರತಿವಾದಿಯರ ಆಸ್ತಿಯ ಕಟ್ಟಡದ ಉದ್ದ ಅಗಲದ ಅಳತೆಯನ್ನು ಕಮಿಷನರ್ ವರದಿಯ ನಕಾಶೆಯಲ್ಲಿ ತೋರಿಸಿರುವುದಿಲ್ಲವೆಂದರೆ ಸರಿ ಸಾಕ್ಷಿ ಮುಂದುವರೆದು ಆ ಬಗ್ಗೆ ನ್ಯಾಯಾಲಯದ ಆದೇಶ ಇರಲಿಲ್ಲವೆನ್ನುತ್ತಾರೆ.

ಮೂಲ ದಾವಾ ಸಂಖ್ಯೆ. 88/2015 ಸಿ ಡಬ್ಲ್ಯೂ 1

ವಾದಿಯರು ಮತ್ತು ಪ್ರತಿವಾದಿಯರು ತಮ್ಮ ತಮ್ಮ ಜಾಗದಲ್ಲಿ ಕಟ್ಟಡವನ್ನು ಕಟ್ಟಿಕೊಂಡಿದ್ದಾರೆಂದರೆ ಸರಿ. ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 2 ರವರ ಆಸ್ತಿ ಮಧ್ಯೆ 3 ಅಡಿ ಅಂತರ ಇರುತ್ತದೆ. ಸದರಿ ಅಂತರ 10 ಅಡಿಗಿಂತ ಹೆಚ್ಚಿಗೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯ ಉದ್ದ 55 ಅಡಿ 5 ಇಂಚು ಮತ್ತು ವಾದಿಯ ಆಸ್ತಿಯ ಉದ್ದ 55 ಅಡಿ ಇರುತ್ತದೆ ಮೂಲ ದಾಖಲೆಗಳ ಪ್ರಕಾರ ಒಟ್ಟು ಉದ್ದ 100 ಅಡಿ ಇದೆ ಎಂದರೆ ಸರಿ. ನಾನು ಸಲ್ಲಿಸಿರುವ ನಕಾಶೆಯಂತೆ ಒಟ್ಟಾರೆ 9 ಅಡಿ 5 ಇಂಚು ಉದ್ದದಲ್ಲಿ ಹೆಚ್ಚಿಗೆ ಇರುತ್ತದೆಂದರೆ ಸರಿ. ಸದರಿ 9 ಅಡಿ 5 ಇಂಚು ಉದ್ದದ ಬಗ್ಗೆ ನನ್ನ ವರದಿಯಲ್ಲಿ ತೋರಿಸಿಲ್ಲ. ನನ್ನ ವರದಿಯ ಜೊತೆ ಹಾಜರುಪಡಿಸಿದ ನಕಾಶೆಯ ಖಂಡಿಕೆ 6 ರಲ್ಲಿ 2 ಅಡಿ 6 ಇಂಚು ಅಗಲ ಅಂತಾ ತೋರಿಸಿರುತ್ತೇನೆ ಆದರೆ ಅದರ ಉದ್ದ ಎಷ್ಟು ಇದೆ ಅಂತಾ ಖಂಡಿಕೆ 6 ರಲ್ಲಿ ತೋರಿಸಿರುವುದಿಲ್ಲ.

ನನ್ನ ವರದಿಯ ಜೊತೆ ಹಾಜರುಪಡಿಸಿದ ನಕಾಶೆಯಲ್ಲಿ ದಾವಾಸ್ತಿಯ ಪಶ್ಚಿಮ ದಿಕ್ಕಿಗೆ ಎ ಟು ಡಿ ಅಂತಾ ತೋರಿಸಿದ ಕ್ಷೇತ್ರದ ಅಳತೆಯನ್ನು ಮಾಡಿದ್ದೇನೆ. ನೀವು ನಿಮ್ಮ ನಕಾಶೆಯ 6 ನೇ ಖಂಡಿಕೆಯಲ್ಲಿ ಹುದುವಿನ ಗೋಡೆಯ ಬಗ್ಗೆ ಉಲ್ಲೇಖಿಸಿದ್ದು ಆ ಹುದುವಿನ ಗೋಡೆ ಯಾರಿಗೆ ಸಂಬಂಧಿಸಿದ್ದು ಇರುತ್ತದಂತಾ ಪರಿಶೀಲನೆ ಮಾಡಿದ್ರಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಹುದುವಿನ ಗೋಡೆ ಇರುವುದಿಲ್ಲವೆನ್ನುತ್ತಾರೆ.

ವಾದಿಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಒತ್ತುವರಿಯಾಗಿರುತ್ತದೆ. ಪ್ರತಿವಾದಿ ನಂ.3 ನೇಯವರ ಆಸ್ತಿ ನಂ.257 ಮತ್ತು ಪ್ರತಿವಾದಿ ನಂ.1 ಮತ್ತು 2 ರವರ ಆಸ್ತಿ ನಂ.258 ರ ಭಾಗಾಂಶದ ಪೂ-ಪ ವಿಸ್ತೀರ್ಣವನ್ನು ನಾನು ಅನುಭವದಂತೆ ತೋರಿಸಿರುತ್ತೇನೆ. ಪ್ರತಿವಾದಿಯರ ಆಸ್ತಿಯ ದಕ್ಷಿಣ ಭಾಗದಲ್ಲಿ ಯಾವುದೇ ಒತ್ತುವರಿ ಇರುವುದಿಲ್ಲ. ವಾದಿಯರ ಆಸ್ತಿಯ ಉತ್ತರ ಭಾಗದಲ್ಲಿ ಒತ್ತುವರಿ ಇರುತ್ತದೆ. ನಾನು ನನ್ನ ವರದಿಯಲ್ಲಿ ವಾದಿಯ ಆಸ್ತಿಯ ಉತ್ತರ ಭಾಗದಲ್ಲಿ ಒತ್ತುವರಿಯಾದ ಬಗ್ಗೆ ತೋರಿಸಿರುತ್ತೇನೆ. ನಾನು ತೋರಿಸಿರುವಂತಹ ಒತ್ತುವರಿ ಕುರಿತು ಆ ದಿನ ಪುರಸಭೆಯವರು ಯಾವುದೇ ದಾಖಲೆ ನೀಡಿಲ್ಲ. ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 2 ರವರ ಆಸ್ತಿಗಳ ಮಧ್ಯೆ ಕಟ್ಟಡದ ಗೋಡೆ ಹೊರತುಪಡಿಸಿದ ಜಾಗವನ್ನು ತೋರಿಸಿದರೆ ನಿಜಾಂಶ ಗೊತ್ತಾದಂತಂತಾ ಹೇಳಿ ವರದಿಯಲ್ಲಿ ಆ ರೀತಿ ಜಾಗವನ್ನು ತೋರಿಸಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ ನಂ.1 ಮತ್ತು 2 ರವರ ಆಸ್ತಿಯನ್ನು ದಾಖಲೆಗಳ ಪ್ರಕಾರ ಉದ್ದದಲ್ಲಿ ಅಳತೆ ಮಾಡಿದಾಗ ಸದರಿ 50 ಅಡಿ ಉದ್ದ ನಕಶೆಯಲಿಲ ತೋರಿಸಿರುವ ಶೌಚಾಲಯದ ಒಳಗೆ ಬರುತ್ತದೆ. ನನ್ನ ನಕಾಶೆಯಲ್ಲಿ ಶೌಚಾಲಯದ ಉದ್ದ ಅಗಲ ತೋರಿಸಿರುತ್ತೇನೆ. ನಾನು ನನ್ನ ವರದಿಯ ನಕಾಶೆಯ ಖಂಡಿಕೆ ನಂ.1

ರಿಂದ 7 ರಲ್ಲಿ ವಿವರಿಸಿರುವಂತೆ ವಾದಿ ಮತ್ತು ಪ್ರತಿವಾದಿಯರ ದಾಖಲೆಗಳನ್ನು ತಾಳೆ ಮಾಡಿ ಅಳತೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಸದರಿ ಮೂಲ ದಾಖಲೆಗಳನ್ನು ತಾಳೆ ಮಾಡಿ ಅಳತೆ ಮಾಡಿದರೆ ವಾದಿಯ ಜಾಗದಲ್ಲಿ ಪ್ರತಿವಾದಿಗಳು ಅತಿಕ್ರಮಣ ಮಾಡಿರುವ ವಿಚಾರ ಗೊತ್ತಾಗುತ್ತದಂತಾ ಹೇಳಿ ಆ ರೀತಿ ನಾನು ದಾಖಲೆಗಳನ್ನು ನೋಡಿ ಅಳತೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ.

ನಾನು ನ್ಯಾಯಾಲಯದ ಆದೇಶದಂತೆ ಸರ್ವೆ ಮಾಡಿ ಸಲ್ಲಿಸಿರುವ ವರದಿಗಳು ತಿರಸ್ಕರಿಸಲ್ಪಟ್ಟು ಪುನಃ ಸರ್ವೆಗಾಗಿ ಆದೇಶವಾಗಿದ್ದು ಇರುತ್ತದೆಂದರೆ ಸರಿಯಲ್ಲ. ನಾನು ಸಲ್ಲಿಸಿರುವ ವರದಿಯ ಅವಲಂಭನೆ ಮಾಡಿ ಪುನಃ ಸರ್ವೆ ಮಾಡಲು ನನಗೆ ತೊಂದರೆ ಇಲ್ಲ. ಕಚ್ಚಾ ನಕಾಶೆ ಮತ್ತು ವರದಿಯ ನಕಾಶೆಯನ್ನು ನಾನು ಕಚೇರಿಯಲ್ಲಿ ತಯಾರಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಯ ವಾಸ್ತವ ಸ್ಥಿತಿ ಬೇರೆ ಇದೆ ಮತ್ತು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯ ವಾಸ್ತವ ಸ್ಥಿತಿ ಬೇರೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಅನುಕೂಲ ಮಾಡುವ ಅವರಿಗೆ ಅನುಕೂಲಕ್ಕೆ ತಕ್ಕಂತೆ ನಕಾಶೆಯನ್ನು ಮತ್ತು ವರದಿಯನ್ನು ತಯಾರಿಸಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯದ ನಿಶದೇಶನದಂತೆ ಮತ್ತು ಉಭಯ ಪಕ್ಷಕಾರರು ಸಲ್ಲಿಸಿದ ಮೆಮೋ ಆಫ್ ಇನ್ಸಟ್ರಕ್ಷನ್ ನಂತರ ನಾನು ಅಳತೆ ಕಾರ್ಯವನ್ನು ಪೂರೈಸಿರುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ